ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, **ಕೊಪ್ಪಳ.**

**ಸಿ. ಸಿ. ನಂಃ 354/2019**

**ರಾಜ್ಯ ಪರ ಃ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆ ಃ ವಿರುದ್ಧ ಃ ಪಂಚಕ್ಷರಾಯ್ಯ**

**ಆರೋಪಿ. ಪಂಚರಾಕ್ಷರಾಯ್ಯ ತಂದೆ ಚೆನ್ನಬಸಯ್ಯ ಹಿರೇಮಠ ವಃ46**
**ವರ್ಷ, ಉಃಚಾಲಕ, ಸಾಃ ಕುಕನೂರು ತಾಃಕೊಪ್ಪಳ.**

***ದಂಡ ಪ್ರಕ್ರಿಯಾ ಸಂಹಿತೆ ಕಲಂಃ 251 ರಡಿ ಆರೋಪಿಯ ವಿಹಿತ ಕ್ರಮದ ಹೇಳಿಕೆ.***

**ದಿನಾಂಕ 16-09-2018 ರಂದು ಬೆಳಗಿನ ಜಾವ 6ಃ30 ಗಂಟೆಗೆ ಕೊಪ್ಪಳ ಗ್ರಾಮೀಣ ಪೋಲೀಸ ಠಾಣಾ ವ್ಯಾಪ್ತಿಯ ಎನ್.ಹೆಚ್ 63 ಕೊಪ್ಪಳ-ಹೊಸಪೇಟೆ ರಸ್ತೆ ಆರ್.ಟಿ.ಸಿ ರಸ್ತೆ ಆರ್.ಟಿ.ಸಿ ಆಫೀಸ್ ಹತ್ತಿರ ಆರೋಪಿಯಾದ ನೀವು ನಿಮ್ಮ ಕೆ.ಎಸ್.ಆರ್.ಟಿ.ಸಿ ನಂಃಕೆ.ಎ-37/ಎಫ್-0804 ನೇದ್ದರಲ್ಲಿ ಸಾಕ್ಷಿ ನಂಃ04, 08 ನೇದ್ದನ್ನು ಮತ್ತು ಸಾಕ್ಷಿ ನಂಃ08 ನೇದ್ದವರಾದ ಬಸ್ಸಿನ ನಿರ್ವಾಹಕರನ್ನು ಇತರೇ ಪ್ರಯಾಣಿಕರನ್ನು ಕೊಡಿಸಿಕೊಂಡು ನಿಮ್ಮ ಬಸ್ಸನ್ನು ಹೊಸಪೇಟೆ ಕಡೆಯಿಂದ ಕೊಪ್ಪಳದ ಕಡೆಗೆ ಅತಿವೇಗ ಮತ್ತು ಅಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು ರಸ್ತೆಯ ಪಕ್ಕದಲ್ಲಿರುವ ವಿದ್ಯುತ್ ಕಂಬಕ್ಕೆ ಟಕ್ಕರಕೊಟ್ಟು ಅಪಘಾತ ಮಾಡಿದ್ದರಿಂದ ಬಸ್ಸಿನಲ್ಲಿದ್ದ ಸಾಕ್ಷಿ ನಂಃ4 ಮತ್ತು 8 ನೇದ್ದವರಿಗೆ ಭಾರಿ ಸ್ವರೂಪದ ಗಾಯಗಳಾಗಿದ್ದಲ್ಲದೇ ಆರೋಪಿಯಾದ ನಿನಗೂ ಸಹ ಭಾರೀ ಸ್ವರೂಪದ ಗಾಯವಾಗಿದ್ದು ಇರುತ್ತದೆ. ಈ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 279, 338 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.**

ಪ್ರಶ್ನೆ1ಃ ನಿನಗೆ ಈಗ ಓದಿ ಹೇಳಿದ ಆಪಾದನೆ ತಿಳಿಯಿತೇ ?

ಆರೋಪಿ ಉತ್ತರ ಃ

ಪ್ರಶ್ನೆ 2ಃ ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತೀಯಾ ? ಅಥವಾ ಈ ನ್ಯಾಯಾಲಯದಿಂದ ವಿಚಾರಣೆ ಆಗಬೇಕೆ?

ಆರೋಪಿ ಉತ್ತರ ಃ

( ಸದರಿ ಹೇಳಿಕೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಕೇಳಿ ಅವರು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೊಳ್ಳಲಾಯಿತು ಅಂತಾ ಧೃಡೀಕರಿಸುತ್ತೇನೆ ).

*ಸ್ಥಳ ಃ ಕೊಪ್ಪಳ.*

*ದಿನಾಂಕಃ16-02-2022*

*(ಆದಿತ್ಯಕುಮಾರ್.ಹೆಚ್.ಆರ್),*
ಹೆಚ್ಚುವರಿ *ಪ್ರ. ದ. ನ್ಯಾ. ದಂ ಗಳು,*
**ಕೊಪ್ಪಳ.**